ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ
UNIVERSITY OF HORTICULTURAL SCIENCES, BAGALKOT
ICAR - KRISHI VIGYAN KENDRA, KOLAR
ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ, ಕೋಲಾರ
भा.कृ.अ.प- कृषि विज्ञान केंद्र, कोलार



# e- NEWS LETTER / ಇ–ವಾರ್ತಾ ಪತ್ರಿಕೆ



ಸಂಚಿಕೆ: 03 | ಅಕ್ಟೋಬರ್– ಡಿಸೆಂಬರ್–2020 | ಸಂಪುಟ: 12

## ಗೌರವಾನ್ವಿತ ಕುಲಪತಿಗಳ ನುಡಿಗಳು



ಡಾ. ಕೆ. ಎಮ್. ಇಂದಿರೇಶ್

ಕೃಷಿ ವಿಜ್ಞಾನ ಕೇಂದ್ರವು ಕೋವಿಡ್ ವಿಷಮ ಸ್ಥಿತಿಯಲ್ಲಿ ಕೆಲಸ ಕಳೆದುಕೊಂಡ ಹಾಗೂ ಆಸಕ್ತ ನಿರೂದ್ಯೋಗ ಯುವಕ ಯುವತಿಯರಿಗೆ 30 ದಿನಗಳ ಕೃಷಿ ಮತ್ತು ಆಹಾರ ಸಂಸ್ಕರಣಾ ಕೌಶಲ್ಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಪ್ರಶಂಶನೀಯ. 12 ಮುಂಚೂಣಿ ಪ್ರಾತ್ಯಕ್ಷಿಕೆಗಳು, 4 ತಂತ್ರಜ್ಞಾನ ಮರುಪರಿಶೀಲನೆಗಳು ಮತ್ತು ಜಿಲ್ಲೆಯ ವಿವಿಧ ಇಲಾಖೆಗಳ ಜೊತೆಗೂಡಿ ಸಮಗ್ರ ಕೃಷಿ, ಮಣ್ಣಿನ ಫಲವತ್ತತೆಯ ನಿರ್ವಹಣೆ ಹಾಗೂ ಮಣ್ಣು ಪರೀಕ್ಷೆಯ ಮಹತ್ವ, ಮಾವು ಹಾಗೂ ಆಲೂಗಡ್ಡೆ ಬೆಳೆಯ ಸಮಗ್ರ ನಿರ್ವಹಣೆಯ ಕುರಿತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ಹಾಗೂ ವಿವಿಧ ಸಮಸ್ಯಾತ್ಮಕ ತಾಕುಗಳಿಗೆ ಭೇಟಿ ನೀಡಿ ನಿವಾರೋಣಪಾಯಗಳನ್ನು ಸೂಚಿಸಿರುವುದು, ರಾಗಿ, ಟೊಮ್ಯಾಟೊ ಹಾಗೂ ರೇಷ್ಮೆ ಬೆಳೆಗಳಲ್ಲಿ ಕ್ಷೇತ್ರೋತ್ಸವವನ್ನು ಹಮ್ಮಿಕೊಂಡಿರುವುದರ ಜೊತೆಗೆ ರೈತ ಮಹಿಳಾ ದಿವಸ, ವಿಶ್ವ ಮಣ್ಣು ದಿನ ಹಾಗೂ ರೈತ ದಿನಗಳನ್ನು ಅರ್ಥಪೂರ್ಣವಾಗಿ ಆಚರಿಸಿರುವುದು ಸಂತೋಷದ ವಿಷಯ. ಮುಂಬರುವ ದಿನಗಳಲ್ಲಿ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಹಾಗೂ ಯಶಸ್ಸುಗೊಳಿಸಬೇಕೆಂದು ಹಾರೈಸುತ್ತೇನೆ.

## 30 ದಿನಗಳ ಕೃಷಿ ಮತ್ತು ಆಹಾರ ಸಂಸ್ಕರಣಾ ಕೌಶಲ್ಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮ



ಭಾರತ ದೇಶವು ಹಣ್ಣು ಮತ್ತು ತರಕಾರಿ ಉತ್ಪಾದನೆಯಲ್ಲಿ 2ನೇ ಸ್ಥಾನದಲ್ಲಿದ್ದು, ಆದರೆ ಮೌಲ್ಯವರ್ಧನೆ ಪ್ರಮಾಣ ಕನಿಷ್ಠಮಟ್ಟದಲ್ಲಿರುತ್ತದೆ. ಸ್ಥಳಿಯವಾಗಿ ಕಡಿಮೆ ಬೆಲೆಯಲ್ಲಿ ದೊರೆಯುವ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಮೌಲ್ಯವರ್ಧನೆಯ ಪ್ರಮಾಣವನ್ನು ಹೆಚ್ಚಿಸಲು ಹಾಗೂ ಸ್ಥಳೀಯ ನಿರೂದ್ಯೋಗ ಯುವತಿ ಹಾಗೂ ಯುವಕರಿಗೆ ಸ್ವಂತ ಉದ್ಯಮವನ್ನು ಪ್ರಾರಂಭಿಸಲು ಬೇಕಾದ ಕೌಶಲ್ಯವನ್ನು ಒದಗಿಸಲು ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಬೆಂಗಳೂರು, ಕರ್ನಾಟಕ ಉದ್ಯಮಶೀಲತೆ ಅಭಿವೃದ್ಧಿ ಕೇಂದ್ರ (ಸೀಡಾಕ್) ಧಾರವಾಡ ಇವರ ಸಹಯೋಗದಲ್ಲಿ 30 ದಿನಗಳ ಕೃಷಿ ಮತ್ತು ಆಹಾರ ಸಂಸ್ಕರಣಾ ಕೌಶಲ್ಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮವನ್ನು ದಿ: 2.11.2020 ರಿಂದ 04.12.2020 ರವರೆಗೆ ಹಮ್ಮಿಕೊಳ್ಳಲಾಗಿತ್ತು. ಸಮಾರಂಭವನ್ನು ಉದ್ಘಾಟಿಸಿ ಶ್ರೀ. ಮಧು ಎಮ್.ಎಸ್ ರವರು ಇಂತಹ ತರಬೇತಿಗಳು ಆತ್ಮವಿಶ್ವಾಸವನ್ನು ಹೆಚ್ಚಿಸಿ ನವ ಉದ್ಯಮ ಸ್ಥಾಪನೆಗೆ ಪ್ರೇರಿತವಾಗಿದೆ. ತರಬೇತಿಯ ಉದ್ದೇಶ ನಿರುದ್ಯೋಗಿಗಳನ್ನು ಉದ್ಯೋಗಿಗಳಾಗಿ ಮಾಡಿಸುವುದಾಗಿದೆ ಎಂದು ತಿಳಿಸಿದರು. ನಂತರ ಈ ತರಬೇತಿ ಪ್ರಯುಕ್ತ ಹೊರಡಿಸಲಾದ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು.



ಶ್ರೀಮತಿ ವಿ.ಡಿ. ರೂಪಾ ದೇವಿ, ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಜಿಲ್ಲಾ ಪಂಚಾಯತ್ ಕೋಲಾರ, ಡಾ. ಟಿ.ಬಿ. ಬಸವರಾಜು, ಸಹ ವಿಸ್ತರಣಾ ನಿರ್ದೇಶಕರು (ದ), ತೋವಿವಿ, ಬಾಗಲಕೋಟೆ, ಡಾ. ಬಿ.ಜಿ. ಪ್ರಕಾಶ್, ಡೀನ್, ತೋ.ಮ.ವಿ. ಕೋಲಾರ, ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು ಕೆ. ತುಳಸಿರಾಮರವರು ಸತತ 30 ದಿನಗಳ ಕಾಲ ತರಬೇತಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಕೆವಿಕೆ ವಿಜ್ಞಾನಿಗಳು ಹಾಗೂ ಸಿಬ್ಬಂದಿಗಳನ್ನು ಶ್ಲಾಘಿಸಿದರು.



## ಮುಂಚೂಣಿ ಪ್ರಾತ್ಯಕ್ಷಿಕೆ

ಕೋಲಾರ ಜಿಲ್ಲೆಯ ಪ್ರಮುಖ ಬೆಳೆಗಳಲ್ಲಿ ಆಧುನಿಕ ಹಾಗೂ ಸಮಗ್ರ ಬೆಳೆ ನಿರ್ವಹಣೆಯ ಬಗ್ಗೆ ಜಾಗೃತಿ ಮೂಡಿಸಲು ವಿವಿಧ ಮುಂಚೂಣಿ ಪ್ರಾತ್ಯಕ್ಷತೆಗಳನ್ನು ಗುರುತಿಸಲಾದ ಗ್ರಾಮಗಳಲ್ಲಿ ಪ್ರಾರಂಬಿಸಿ, ನಿಯಮಿತವಾಗಿ ಪ್ರಾತ್ಯಕ್ಷಿಕೆಗಳಿಗೆ ಭೇಟಿ ನೀಡಿ ನಿರ್ಣಾಯಕ ಸೌಲಭ್ಯಗಳನ್ನು ಒದಗಿಸಿ, ಬೆಳೆಯ ಬೆಳವಣಿಗೆಯನ್ನು ರೈತರ ಪದ್ಧತಿಗಳಿಗೆ ಹೋಲಿಸಿ ಸಂಬಂಧಪಟ್ಟ ವಿಜ್ಞಾನಿಗಳು ಪರಿಶೀಲಿಸಿದರು.







| ಅ.ನಂ | ವಿಷಯ | ಪ್ರಯೋಗಗಳ ಸಂಖ್ಯೆ/ ಒಟ್ಟು ಪ್ರದೇಶ | ಸ್ಥಳ | ವಿಜ್ಞಾನಿ |
|---|---|---|---|---|
| 1. | ಸಾವಯವ ಮಾವು ಕೃಷಿ (ಪಿಕೆವಿವೈ) | 50 (20 ಹೆಕ್ಟೇರ್) | ಕಾಡುದೇವಾಂಡಹಳ್ಳಿ, ಹೋಳುರು, ಕೋಡಿಚೇರುವು, ಗುಂಡಮನತ್ತ | ಶ್ರೀ. ತುಳಸಿರಾಮ ಕೆ. |
| 2. | ತೊಗರಿಯಲ್ಲಿ ಸಮಗ್ರ ಪೀಡೆ ನಿರ್ವಹಣೆ | 35 (16 ಹೆಕ್ಟೇರ್) | ಬೈಯಪ್ಪನಹಳ್ಳಿ, ಉರಿಗಿಲಿ, ಬುಸನಹಳ್ಳಿ | ಶ್ರೀ. ತುಳಸಿರಾಮ ಕೆ. |
| 3. | ರಾಗಿ – ಅಧಿಕ ಇಳುವರಿ ಮತ್ತು ಬರ ನಿರ್ವಹಣೆಗಾಗಿ ಹೊಸ ತಳಿ ಕೆ.ಎಂ.ಆರ್ –360 ಪರಿಚಯ | 20 (8 ಹೆಕ್ಟೇರ್) | ಯಡಹಳ್ಳಿ (ಕೋಲಾರ ತಾ.), ತಿಮ್ಮಸಂದ್ರ (ಕೆ.ಜಿ.ಎಫ್. ತಾ) | ಡಾ. ಅನಿಲಕುಮಾರ್ ಎಸ್ |
| 4. | ಹುರುಳಿ – ಅಧಿಕ ಇಳುವರಿಗಾಗಿ ಅಖಐಆಂ–18 ತಳಿಯ ಪರಿಚಯ | 10 (2 ಹೆಕ್ಟೇರ್) | ಕಾಡುದೇವಾಂಡಹಳ್ಳಿ, ಹೋಳುರು, ತಿಮ್ಮಸಂದ್ರ (ಕೆ.ಜಿ.ಎಫ್. ತಾ) | ಡಾ. ಅನಿಲಕುಮಾರ್ ಎಸ್ |
| 5. | ಟೊಮ್ಯಾಟೊ– ಸಮಗ್ರ ರೋಗ ಮತ್ತು ಕೀಟಗಳ ನಿರ್ವಹಣೆ | 10 (2 ಹೆಕ್ಟೇರ್) | ಯಡಹಳ್ಳಿ (ಕೋಲಾರ ತಾ), ತಿಮ್ಮಸಂದ್ರ (ಕೆ.ಜಿ.ಎಫ್. ತಾ) | ಡಾ. ಅಂಬಿಕಾ ಡಿ.ಎಸ್ |





| ಅ.ನಂ | ವಿಷಯ | ಪ್ರಯೋಗಗಳ ಸಂಖ್ಯೆ/ ಒಟ್ಟು ಪ್ರದೇಶ | ಸ್ಥಳ | ವಿಜ್ಞಾನಿ |
|---|---|---|---|---|
| 6. | ಬಳ್ಳಿಬೀನ್ಸ್ – ಬೆಳೆಯ ಸಮಗ್ರ ನಿರ್ವಹಣೆಯಿಂದ ಹಳದಿ ನಂಜಾಣು ರೋಗದ ನಿರ್ವಹಣೆ | 5 (1 ಹೆಕ್ಟೇರ್) | ತಿಪ್ಪಸಂದ್ರ (ಮಾಲೂರು ತಾ) | ಡಾ. ಜ್ಯೋತಿ ಕಟ್ಟೇಗೌಡರ್ |
| 7. | ಮಾವು– ಸಮಗ್ರ ಬೆಳೆ ನಿರ್ವಹಣೆ | 5 (2 ಹೆಕ್ಟೇರ್) | ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಜ್ಯೋತಿ ಕಟ್ಟೇಗೌಡರ್ |
| 8. | ಚೆಂಡುಹೂವು ಹೊಸತಳಿ (ಅರ್ಕಾ ಅಗ್ನಿ) | 3 (0.3 ಹೆಕ್ಟೇರ್) | ಯಡಹಳ್ಳಿ (ಕೋಲಾರ ತಾ) | ಡಾ. ಜ್ಯೋತಿ ಕಟ್ಟೇಗೌಡರ್ |
| 9. | ಹಿಪ್ಪುನೇರಳೆಯ ಅಧಿಕ ಇಳುವರಿಗೆ ಸಮಗ್ರ ಪೋಷಕಾಂಶಗಳ ನಿರ್ವಹಣೆ ಪ್ರಾತ್ಯಕ್ಷಿಕೆ | 5 (2 ಹೆಕ್ಟೇರ್) | ಯಡಹಳ್ಳಿ (ಕೋಲಾರ ತಾ) | ಡಾ. ಶಶಿಧರ್ ಕೆ.ಆರ್ |
| 10. | ಹೆಚ್ಚುವರಿ ಆದಾಯಕ್ಕಾಗಿ ಹಿಪ್ಪುನೇರಳೆ ಮರಪದ್ಧತಿಯಲ್ಲಿ ಅವರೆ ಅಂತರಬೆಳೆ ಪ್ರಾತ್ಯಕ್ಷಿಕೆ | 5 (1 ಹೆಕ್ಟೇರ್) | ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಶಶಿಧರ್ ಕೆ.ಆರ್ |
| 11. | ಗುಣಮಟ್ಟದ ರೇಷ್ಮೆಗೂಡಿನ ಉತ್ಪಾದನೆಗೆ ಕೃಷ್ಣರಾಜ (ಈಅ2 ಫಿ ಈಅ1) ಬೈವೋಲ್ಟಿನ್ ಸಂಕರಣ ತಳಿಯ ಪ್ರಾತ್ಯಕ್ಷಿಕೆ | 05 ( 1 ಹೆಕ್ಟೇರ್) | ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಶಶಿಧರ್ ಕೆ.ಆರ್ |
| 12. | ಬೈವೋಲ್ಟಿನ್ ರೇಷ್ಮೆಗೂಡಿನ ಅಧಿಕ ಇಳುವರಿಗೆ ರೇಷ್ಮೆಹುಳು ಸಾಕಾಣಿಕಾ ಮನೆಯಲ್ಲಿ ಮಂಜು ಗವಿಸುವ ತಾಂತ್ರಿಕತೆ ಪ್ರಾತ್ಯಕ್ಷಿಕೆ | 05 ( 1 ಹೆಕ್ಟೇರ್) | ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಶಶಿಧರ್ ಕೆ.ಆರ್ |
| 13. | ಪೌಷ್ಠಿಕ ಕೈತೋಟ | – | ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಚಿಕ್ಕಣ್ಣ ಜಿ.ಎಸ್ |









## ತಂತ್ರಜ್ಞಾನ ಮರುಪರಿಶೀಲನೆ

| ಅ.ನಂ | ವಿಷಯ | ಪ್ರಯೋಗಗಳ ಸಂಖ್ಯೆ/ ಒಟ್ಟು ಪ್ರದೇಶ | ಸ್ಥಳ | ವಿಜ್ಞಾನಿ |
|---|---|---|---|---|
| 1 | ಹಿರೇಕಾಯಿ ಬೆಳೆಯ ನಂಜಾಣು ರೋಗದ ನಿರ್ವಹಣೆ | 03 (1.2 ಹೆ) | ತಿಪ್ಪಸಂದ್ರ (ಮಾಲೂರ ತಾ) | ಡಾ. ಅಂಬಿಕಾ ಡಿ.ಎಸ್. |
| 2 | ರೇಷ್ಮೆ ಕೃಷಿ ತ್ಯಾಜ್ಯ ವಸ್ತುಗಳ ಕಾಂಪೋಸ್ಟೀಕರಣದಲ್ಲಿ ಬಳಸುವ ವಿವಿಧ ಸೂಕ್ಷ್ಮಾಣುಜೀವಿಗಳ ಪರಿಶೀಲನೆ | 0.3 (1.2 ಹೆ) | ಚಿಟ್ನಹಳ್ಳಿ ಮತ್ತು ಕಾಡುದೇವಾಂಡಹಳ್ಳಿ (ಕೋಲಾರ ತಾ) | ಡಾ. ಶಶಿಧರ್ ಕೆ.ಆರ್ |
| 3 | ಹಿಪ್ಪುನೇರಳೆ ಬೆಳೆಯ ಪೋಷಕಾಂಶಗಳ ನಿರ್ವಹಣೆಯಲ್ಲಿ ಪರಿಸರಸ್ನೇಹಿ ಎಲೆ ಸಿಂಪರಕಗಳ ಪರಿಶೀಲನೆ | 0.3 (1.2 ಹೆ) | ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಶಶಿಧರ್ ಕೆ.ಆರ್ |
| 4 | ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಊಜಿನೊಣದ ನಿರ್ವಹಣಾ ಕ್ರಮಗಳ ಪರಿಶೀಲನೆ | 0.3 (1.2 ಹೆ) | ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಶಶಿಧರ್ ಕೆ.ಆರ್ |





## ತರಬೇತಿ ಕಾರ್ಯಕ್ರಮಗಳು






ಕೋಲಾರ ಜಿಲ್ಲೆಯಾದ್ಯಂತ ಕಳೆದ ಮಾಸಗಳಲ್ಲಿ ಆಲೂಗಡ್ಡೆ ಮಾವು, ಮಣ್ಣಿನ ಫಲವತ್ತತೆ ನಿರ್ವಹಣೆ, ಸಮಗ್ರ ಕೃಷಿ ಹಾಗೂ ರೇಷ್ಮೆ ಬೆಳೆಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಜಿಲ್ಲೆಯ ವಿವಿಧ ಇಲಾಖೆಗಳ ಜೊತೆಗೂಡಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ವಿವರಗಳು ಈ ಕೆಳಗಿನಂತಿವೆ.






| ಕ್ರ.ಸಂ | ತರಬೇತಿಯ ವಿಷಯ | ದಿನಾಂಕ | ಸ್ಥಳ | ಭಾಗವಹಿಸಿದ ರೈತರ ಸಂಖ್ಯೆ |
|---|---|---|---|---|
| 1. | ಸಮಗ್ರ ಕೃಷಿ | 06.10.2020 | ಬನಹಳ್ಳಿ, ಮಾಲೂರು | 110 |
| 2. | ಸಮಗ್ರ ಕೃಷಿ | 16.10.2020 | ಕೊಟ್ಟಿಗಾನಹಳ್ಳಿ, ಕೋಲಾರ | 60 |
| 3. | ಮಣ್ಣಿನ ಫಲವತ್ತತೆ ನಿರ್ವಹಣೆ ಹಾಗೂ ಮಣ್ಣು ಪರೀಕ್ಷೆಯ ಮಹತ್ವ | 19.10.2020 | ಶಕ್ತಿಕಲ್, ಬಾಟುವರಹಳ್ಳಿ | 39 |
| 4. | ಮಣ್ಣಿನ ಫಲವತ್ತತೆ ನಿರ್ವಹಣೆ ಹಾಗೂ ಮಣ್ಣು ಪರೀಕ್ಷೆಯ ಮಹತ್ವ | 19.10.2020 | ತಾಯಲೂರು, ಮುಳಬಾಗಿಲು | 42 |
| 5. | ಮಾವಿನ ಉತ್ತಮ ಬೇಸಾಯ ಕ್ರಮಗಳು | 23.10.2020 | ಗುಂಡಮನತ್ತ | 35 |
| 6. | ಮಣ್ಣಿನ ಫಲವತ್ತತೆಯ ನಿರ್ವಹಣೆ | 23.10.2020 | ರಾಜೇಂದ್ರಹಳ್ಳಿ, ಮುಳಬಾಗಿಲು | 30 |
| 7. | ಮಣ್ಣಿನ ಫಲವತ್ತತೆಯ ನಿರ್ವಹಣೆ | 23.10.2020 | ಬೈರಕೂರು, ಮುಳಬಾಗಿಲು | 41 |
| 8. | ಆಲೂಗಡ್ಡೆ ಬೆಳೆಯ ಸಮಗ್ರ ನಿರ್ವಹಣೆ | 23.10.2020 | ಬನಹಳ್ಳಿ, ಮಾಲೂರು | 50 |
| 9. | ಆಲೂಗಡ್ಡೆ ಬೆಳೆಯ ಸುಧಾರಿತ ಬೇಸಾಯ ಕ್ರಮಗಳು | 24.10.2020 | ಶ್ರೀನಿವಾಸಸಂದ್ರ, ಕೆ.ಜಿ.ಎಫ್. | 50 |
| 10. | ಮಣ್ಣಿನ ಫಲವತ್ತತೆಯ ನಿರ್ವಹಣೆ | 29.10.2020 | ಬನಹಳ್ಳಿ, ಮಾಲೂರು | 29 |
| 11. | ದ್ವಿತಳಿ ರೇಷ್ಮೆ ಕೃಷಿಯಲ್ಲಿ ಸುಧಾರಿತ ಉತ್ಪಾದನಾ ತಾಂತ್ರಿಕತೆಗಳು | 04.11.2020 | ಬಳಗೆರೆ, ಕೋಲಾರ | 40 |
| 12 | ಸುರಕ್ಷಿತ ಪೀಡೆನಾಶಕಗಳ ಬಳಕೆ ಮತ್ತು ಬೀಜೋಪಚಾರ | 04.11.2020 | ಲಕ್ಕೂರು, ಮಾಲೂರು | 50 |
| 13 | ಚಳಿಗಾಲದಲ್ಲಿ ಹಿಪ್ಪುನೇರಳೆ ಹಾಗೂ ರೇಷ್ಮೆ ಹುಳು ನಿರ್ವಹಣೆ | 06.11.2020 | ನಾಯಕರ್‌ಹಳ್ಳಿ | |













| ಕ್ರ.ಸಂ | ತರಬೇತಿಯ ವಿಷಯ | ದಿನಾಂಕ | ಸ್ಥಳ | ಭಾಗವಹಿಸಿದ ರೈತರ ಸಂಖ್ಯೆ |
|---|---|---|---|---|
| 14 | ಮಣ್ಣಿನ ಫಲವತ್ತತೆಯ ನಿರ್ವಹಣೆ ಮತ್ತು ಮಣ್ಣು ಪರೀಕ್ಷೆಯ ಮಹತ್ವ | 06.11.2020 | ಇಂದೂಮಂಗಳ, ಮಾಲೂರು | 50 |
| 15 | ದ್ವಿತಳಿ ರೇಷ್ಮೆಹುಳು ಸಾಕಾಣಿಕೆಯಲ್ಲಿ ಸಮಗ್ರ ನಿರ್ವಹಣೆ | 07.11.2020 | ಕುಪ್ಪನಹಳ್ಳಿ, ಬಂಗಾರಪೇಟೆ | 125 |
| 16 | ಮಣ್ಣಿನ ಫಲವತ್ತತೆಯ ನಿರ್ವಹಣೆ | 11.11.2020 | ಗೌಡಹಳ್ಳಿ, ಕೋಲಾರ | 40 |
| 17 | ಮಣ್ಣಿನ ಫಲವತ್ತತೆಯ ನಿರ್ವಹಣೆ | 11.11.2020 | ಉರಿಗಿಲಿ, ಕೋಲಾರ | 40 |
| 18 | ಆಲೂಗಡ್ಡೆ ಅಂಗಾಂಶ ಗಿಡದ ಕಡ್ಡಿಗಳಿಂದ ಸಸ್ಯಾಭಿವೃದ್ಧಿ ಹಾಗೂ ಬೀಜೋತ್ಪಾದನೆ | 12.11.2020 | ಕೆವಿಕೆ, ಕೋಲಾರ | 100 |
| 19 | ಸಮಗ್ರ ಪೋಷಕಾಂಶ ಹಾಗೂ ಮಣ್ಣಿನ ಫಲವತ್ತತೆಯ ನಿರ್ವಹಣೆ | 13.11.2020 | ನೂಕನಹಳ್ಳಿ, ಕೋಲಾರ | 25 |
| 20 | ಸಮಗ್ರ ಪೋಷಕಾಂಶ ಹಾಗೂ ಮಣ್ಣಿನ ಫಲವತ್ತತೆಯ ನಿರ್ವಹಣೆ | 13.11.2020 | ಮಲ್ಲಸಂದ್ರ, ಕೋಲಾರ | 50 |
| 21 | ಮಣ್ಣಿನ ಫಲವತ್ತತೆಯ ನಿರ್ವಹಣೆಯಲ್ಲಿ ಸಮಗ್ರ ಪೋಷಕಾಂಶಗಳು | 20.11.2020 | ಗಿರ್ನಹಳ್ಳಿ, ಕೋಲಾರ | 40 |
| 22 | ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಮಣ್ಣಿನ ಫಲವತ್ತತೆ ಮತ್ತು ಪೋಷಕಾಂಶಗಳ ನಿರ್ವಹಣೆ | 21.11.2020 | ತಿಪ್ಪೇನಹಳ್ಳಿ, ಕೋಲಾರ | 40 |











| ಕ್ರ.ಸಂ | ತರಬೇತಿಯ ವಿಷಯ | ದಿನಾಂಕ | ಸ್ಥಳ | ಭಾಗವಹಿಸಿದ ರೈತರ ಸಂಖ್ಯೆ |
|---|---|---|---|---|
| 23 | ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಮಣ್ಣಿನ ಫಲವತ್ತತೆ ಮತ್ತು ಪೋಷಕಾಂಶಗಳ ನಿರ್ವಹಣೆ | 21.11.2020 | ಶೆಟ್ಟಿಹಳ್ಳಿ, ಕೋಲಾರ | 40 |
| 24 | ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ ಹಾಗೂ ಸಾವಯವ ಕೃಷಿ | 25.11.2020 | ತೊರಲಕ್ಕಿ, ಮಾಲೂರು | 40 |
| 25 | ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಮಣ್ಣಿನ ಫಲವತ್ತತೆ ಮತ್ತು ಪೋಷಕಾಂಶಗಳ ನಿರ್ವಹಣೆ | 30.11.2020 | ಬನಹಳ್ಳಿ, ಮಾಲೂರು | 40 |
| 26 | ಆಲೂಗಡ್ಡೆ ಬೆಳೆಯ ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ | 10.12.2020 | ಸುಗಟೂರು, ಕೋಲಾರ | 50 |

## ಸಮಸ್ಯಾತ್ಮಕ ಕ್ಷೇತ್ರ ಭೇಟಿ





ಕೆವಿಕೆಯ ವಿಜ್ಞಾನಿಗಳು ಕಳೆದ ತಿಂಗಳುಗಳಲ್ಲಿ ಕ್ರೀಯಾ ಯೋಜನೆ ಹೊರತಾಗಿ ವಿವಿಧ ಬೆಳೆಗಳ ತೋಟಗಳಿಗೆ ಭೇಟಿ ನೀಡಿ ಸಮಸ್ಯೆಗಳನ್ನು ಗುರುತಿಸಿ ಸೂಕ್ತ ನಿರ್ವಹಣೆಗಳನ್ನು ನೀಡಿದರು.

| ದಿನಾಂಕ | ಸ್ಥಳ | ವಿಷಯ | ವಿಜ್ಞಾನಿಗಳು |
|---|---|---|---|
| 03.10.2020 | ಬೆಣಂಗೂರು | ಆಲೂಗಡ್ಡೆ ಬೆಳೆ ನಿರ್ವಹಣೆ | ಡಾ. ಅಂಬಿಕಾ ಡಿ.ಎಸ್, ಡಾ. ಜ್ಯೋತಿ ಕೆ |
| 05.10.2020 | ನರಸಾಪುರ | ನುಗ್ಗೆ- ರಂಧ್ರ ಕೊರೆಯುವ ಹುಳು ನಿರ್ವಹಣೆ | ಕೆ. ತುಳಸಿರಾಮ್, ಡಾ. ಅನಿಲಕುಮಾರ ಎಸ್ ಡಾ. ಅಂಬಿಕಾ ಡಿ.ಎಸ್, ಡಾ. ಜ್ಯೋತಿ ಕೆ, |
| 05.10.2020 | ಪುರವಳ್ಳಿ | ಕಮಲಮ್ ಬೆಳೆ ನಿರ್ವಹಣೆ | ಕೆ. ತುಳಸಿರಾಮ್, ಡಾ. ಅನಿಲಕುಮಾರ ಎಸ್ ಡಾ. ಅಂಬಿಕಾ ಡಿ.ಎಸ್, ಡಾ. ಜ್ಯೋತಿ ಕೆ, |
| 7.10.2020 | ಬೀರಮಾರನಹಳ್ಳಿ | ಸೀಬೆ | ಡಾ. ಅಂಬಿಕಾ ಡಿ.ಎಸ್, ಡಾ. ಚಿಕ್ಕಣ್ಣ ಜಿ.ಎಸ್, ಡಾ. ಶಶಿಧರ್ ಕೆ.ಆರ್, |





| ದಿನಾಂಕ | ಸ್ಥಳ | ವಿಷಯ | ವಿಜ್ಞಾನಿಗಳು |
|---|---|---|---|
| 17.11.2020 | ಸುಗಟೂರು | ಟೊಮ್ಯಾಟೊ– ದುಂಡಾಣು ಸೊರಗು ರೋಗ | ಕೆ. ತುಳಸಿರಾಮ್, ಡಾ. ಅಂಬಿಕಾ ಡಿ.ಎಸ್, ಡಾ. ಜ್ಯೋತಿ ಕೆ |
| 17.11.2020 | ಸುಗಟೂರು | ತೊಗರಿ–ಸ್ಲೀರೋಶಿಯಾ ವಿಲ್ಟ್ | ಕೆ. ತುಳಸಿರಾಮ್, ಡಾ. ಅಂಬಿಕಾ ಡಿ.ಎಸ್, ಡಾ. ಜ್ಯೋತಿ ಕೆ |
| 17.11.2020 | ಶೆಟ್ಟಿಮಾದಮಂಗಲ | ಟೊಮ್ಯಾಟೊ– ಅಂಗಮಾರಿ, ತಳಿಗಳ ಆಯ್ಕೆ | ಕೆ. ತುಳಸಿರಾಮ್, ಡಾ. ಅಂಬಿಕಾ ಡಿ.ಎಸ್, ಡಾ. ಜ್ಯೋತಿ ಕೆ |
| 17.11.2020 | ಸುಗಟೂರು | ರೇಷ್ಮೆ – ಗೊಂಡೆ ಹುಳು ನಿರ್ವಹಣೆ | ಕೆ. ತುಳಸಿರಾಮ್, ಡಾ. ಅಂಬಿಕಾ ಡಿ.ಎಸ್, ಡಾ. ಜ್ಯೋತಿ ಕೆ |
| 25.11.2020 | ಕುಡುವನಹಳ್ಳಿ | ಆಲೂಗಡ್ಡೆ ಬೆಳೆ ನಿರ್ವಹಣೆ | ಡಾ. ಅನಿಲಕುಮಾರ ಎಸ್, ಡಾ. ಅಂಬಿಕಾ ಡಿ.ಎಸ್, ಡಾ. ಜ್ಯೋತಿ ಕೆ |
| 30.11.2020 | ಬನಹಳ್ಳಿ | ಸಮಗ್ರ ಬೆಳೆ ನಿರ್ವಹಣೆ | ಡಾ. ಅನಿಲಕುಮಾರ ಎಸ್ |
| 02.12.2020 | ತಿಪ್ಪಸಚಿದ್ರ | ಗಡ್ಡೆಕೋಸು–ಬೆಳೆ ನಿರ್ವಹಣೆ | ಡಾ. ಜ್ಯೋತಿ ಕೆ, ಡಾ. ಅಂಬಿಕಾ ಡಿ.ಎಸ್, |
| 04.12.2020 | ಪುರದಹಳ್ಳಿ, ವೇಮಗಲ್ | ಕಮಲಮ್ | ಡಾ. ಅನಿಲಕುಮಾರ ಎಸ್ |
| 11.12.2020 | ಪಾರ್ಶ್ವಗಾನಹಳ್ಳಿ | ಅಂಗಾಂಶ ಸಸಿ ಕಾಂಡಗಳಿಂದ ಆಲೂಗಡ್ಡೆ ಉತ್ಪಾದನೆ | ಡಾ. ಜ್ಯೋತಿ ಕಟ್ಟೆಗೌಡರ |
| 14.12.2020 | ಪಾರ್ಶ್ವಗಾನಹಳ್ಳಿ | ಸಮಗ್ರ ಕೃಷಿ ಮತ್ತು ಅಂಗಾಂಶ ಸಸಿ ಕಾಂಡಗಳಿಂದ ಆಲೂಗಡ್ಡೆ ಉತ್ಪಾದನೆ | ಡಾ. ಶಶಿಧರ್ ಕೆ.ಆರ್, ಡಾ. ಜ್ಯೋತಿ ಕಟ್ಟೆಗೌಡರ |




## ಪದ್ಧತಿ ಪ್ರಾತ್ಯಕ್ಷಿತೆ

ಮಾವು ಶ್ರೀನಿವಾಸಪುರ ತಾಲ್ಲೂಕು ಕೋಲಾರ ಜಿಲ್ಲೆಯ ಪ್ರಮುಖ ಬೆಳೆಯಾಗಿದ್ದು, ಡಾ. ಜ್ಯೋತಿ ಕಟ್ಟೇಗೌಡರ್, ವಿಜ್ಞಾನಿ (ತೋಟಗಾರಿಕೆ) ರವರು ದಿನಾಂಕ 07.11.2020 ರಂದು ಕಾಡುದೇವಾಂಡಹಳ್ಳಿಯಲ್ಲಿ ಮಾವು ಸ್ಪೇಷಲ್ ಸಿಂಪರಣೆ ಹಾಗೂ ದಿನಾಂಕ 24–11–2020 ರಂದು ಚೆಂಡು ಹೂವಿನಲ್ಲಿ ಅಧಿಕ ಇಳುವರಿಗಾಗಿ ಚಿವುಟುವುದು ಎಂಬ ಪದ್ಧತಿ ಪ್ರಾತ್ಯೆಕ್ಷಿಕೆಯನ್ನು ಯಡಹಳ್ಳಿಯಲ್ಲಿ ಕೈಗೊಂಡರು.






## ಕ್ಷೇತ್ರೋತ್ಸವ








| ದಿನಾಂಕ | ವಿಷಯ | ಸ್ಥಳ | ಆಯೋಜಕರು | ವಿಜ್ಞಾನಿಗಳು | ಭಾಗವಹಿಸಿದವರ ಸಂಖ್ಯೆ |
|---|---|---|---|---|---|
| 14.10.2020 | ಟೊಮ್ಯಾಟೊ – ಸಮಗ್ರ ರೋಗ ಮತ್ತು ಕೀಟ ನಿಯಂತ್ರಣ | ಯಡಹಳ್ಳಿ | ಕೆವಿಕೆ | ಡಾ. ಅಂಬಿಕಾ ಡಿ.ಎಸ್ | 25 |
| 5.11.2020 | ಅಧಿಕ ಇಳುವರಿಗಾಗಿ ಹಿಪ್ಪುನೇರಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ | ಕಾಡುದೇವಾಂಡಹಳ್ಳಿ | ಕೆವಿಕೆ | ಡಾ. ಶಶಿಧರ್ ಕೆ.ಆರ್ | 30 |
| 11.11.2020 | ಅಧಿಕ ಇಳುವರಿಗಾಗಿ ರಾಗಿಯಲ್ಲಿ ಸುಧಾರಿತ ಬೇಸಾಯ ಪದ್ಧತಿಗಳು | ಬಾಲಸಂದ್ರ | ಕೃಷಿ ಇಲಾಖೆ ಮತ್ತು ಕೆವಿಕೆ | ಡಾ. ಅನಿಲಕುಮಾರ ಎಸ್ | 67 |
| 12.11.2020 | ಅಧಿಕ ಇಳುವರಿಗಾಗಿ ರಾಗಿಯಲ್ಲಿ ಸುಧಾರಿತ ಬೇಸಾಯ ಪದ್ಧತಿಗಳು | ಹುಲಿ ಹೋಬಳಿ ರೆಡ್ಡಿಹಳ್ಳಿ, ಮುಳಬಾಗಿಲು | ಕೃಷಿ ಇಲಾಖೆ ಮತ್ತು ಕೆವಿಕೆ | ಡಾ. ಅನಿಲಕುಮಾರ ಎಸ್ | 47 |







| ದಿನಾಂಕ | ವಿಷಯ | ಸ್ಥಳ | ಆಯೋಜಕರು | ವಿಜ್ಞಾನಿಗಳು | ಭಾಗವಹಿಸಿದವರ ಸಂಖ್ಯೆ |
|---|---|---|---|---|---|
| 29.11.2020 | ರಾಗಿ ಕೆಎಂಆರ್–630 | ಯಡಹಳ್ಳಿ | ಕೆವಿಕೆ | ಡಾ. ಅನಿಲಕುಮಾರ ಎಸ್ | 25 |
| 01.12.2020 | ಅಧಿಕ ಇಳುವರಿಗಾಗಿ ರಾಗಿಯಲ್ಲಿ ಸುಧಾರಿತ ಬೇಸಾಯ ಪದ್ಧತಿಗಳು | ಯಾರಂಘಟ್ಟ | ಕೃಷಿ ಇಲಾಖೆ ಮತ್ತು ಕೆವಿಕೆ | ಡಾ. ಅನಿಲಕುಮಾರ ಎಸ್ | 30 |
| 04.12.2020 | ಅಧಿಕ ಇಳುವರಿಗಾಗಿ ರಾಗಿಯಲ್ಲಿ ಸುಧಾರಿತ ಬೇಸಾಯ ಪದ್ಧತಿಗಳು | ಚೌಡದೇನಹಳ್ಳಿ | ಕೃಷಿ ಇಲಾಖೆ ಮತ್ತು ಕೆವಿಕೆ | ಡಾ. ಅನಿಲಕುಮಾರ ಎಸ್ | 30 |
| 04.12.2020 | ಅಧಿಕ ಇಳುವರಿಗಾಗಿ ರಾಗಿಯಲ್ಲಿ ಸುಧಾರಿತ ಬೇಸಾಯ ಪದ್ಧತಿಗಳು | ಪುರದಹಳ್ಳಿ | ಕೃಷಿ ಇಲಾಖೆ ಮತ್ತು ಕೆವಿಕೆ | ಡಾ. ಅನಿಲಕುಮಾರ ಎಸ್ | 50 |
| 15.12.2020 | ಅಧಿಕ ಆದಾಯಕ್ಕಾಗಿ ಹಿಪ್ಪುನೇರಳೆಯಲ್ಲಿ ಅಂತರ ಬೇಸಾಯ | ಕಾಡುದೇವಾಂಡ ಹಳ್ಳಿ | ಕೆವಿಕೆ | ಡಾ. ಶಶಿಧರ್ ಕೆ.ಆರ್ | 40 |

## ಜಿಲ್ಲಾ ಹವಾಮಾನ ಘಟಕ


ಭಾರತಿಯ ಹವಾಮಾನ ಇಲಾಖೆ ಹಾಗೂ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಒಗ್ಗೂಡಿ ರೈತರಿಗೆ ತಾಲ್ಲೂಕು ಮಟ್ಟದಲ್ಲಿ ಸ್ಥಳೀಯ ಹವಾಮಾನ ಆಧಾರಿತ ಕೃಷಿ ಸಲಹೆಯನ್ನು ನೀಡುವ ಸಲುವಾಗಿ ಕರ್ನಾಟಕ ರಾಜ್ಯದ 12 ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಕೃಷಿ ಹವಾಮಾನ ಘಟಕವನ್ನು ಸ್ಥಾಪಿಸಲಾಗಿದೆ.ಕೋಲಾರ ಜಿಲ್ಲೆಯಲ್ಲೂ ಸಹ ಜಿಲ್ಲಾ ಕೃಷಿ ಹವಾಮಾನ ಘಟಕವನ್ನು ಸ್ಥಾಪಿಸಲಾಗಿದೆ.ಪ್ರತಿ ಮಂಗಳವಾರ ಮತ್ತು ಶುಕ್ರವಾರ ತಾಲ್ಲೂಕುವಾರು ಪತ್ಯೇಕ ಹವಾಮಾನ ಆಧಾರಿತ ಕೃಷಿ ಸಲಹೆಗಳನ್ನು ದೂರವಾಣಿ ಮೂಲಕ ಕಳಿಸಲಾಗುತ್ತದೆ.






ಹಾಗೆಯೆ, ವಿವಿಧ ಸ್ಥಳಗಳಲ್ಲಿ ಹವಾಮಾನ ಆಧಾರಿತ ಆಪ್‌ಗಳ ಕುರಿತು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ದಿನಾಂಕ: 23.10.2020 ರಂದು ಬೈರಕೂರಿನ ರೈತ ಸಂಪರ್ಕ ಕೇಂದ್ರದಲ್ಲಿ, ದಿನಾಂಕ 23.10.2020 ರಂದು ಮುಳಬಾಗಿಲು ತಾಲ್ಲೂಕಿನ ರಾಜೇಂದ್ರ ಹಳ್ಳಿಯಲ್ಲಿ, ದಿನಾಂಕ 29.10.2020 ರಂದು ಮಾಲೂರು ತಾಲ್ಲೂಕಿನ ಬನಹಳ್ಳಿಯಲ್ಲಿ, ದಿನಾಂಕ 06.11.2020 ರಂದು ನಾಯ್ಕರಹಳ್ಳಿ, ಕೋಲಾರ ತಾಲ್ಲೂಕಿನಲ್ಲಿ ಮತ್ತು ದಿನಾಂಕ 10.12.2020 ರಂದು ಸುಗಟೂರು ಕೋಲಾರ ತಾಲ್ಲೂಕಿನಲ್ಲಿ ಹೋರಾವರಣ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವು.ಒಳಾವರಣ ಅರಿವು ಕಾರ್ಯಕ್ರಮವನ್ನು ದಿನಾಂಕ 02.12.2020 ರಂದು ಹಮ್ಮಿಕೊಳ್ಳಲಾಗಿತ್ತು.



## ರೈತರ ಆದಾಯ ದ್ವಿಗುಣಗೊಳಿಸುವಿಕೆ: ಮಾನದಂಡ ಸಮೀಕ್ಷೆ

ಕೇಂದ್ರ ಸರ್ಕಾರದ ಮಹತ್ವಕಾಂಕ್ಷೆಯ ಯೋಜನೆಯಾದ ರೈತರ ಆದಾಯ ದ್ವಿಗುಣಗೊಳಿಸುವಿಕೆಯ ಮೊದಲನೆ ಹಂತದಲ್ಲಿ ರೈತರ ಆದಾಯದ ಸಮೀಕ್ಷೆಯನ್ನು ಕೃಷಿ ವಿಜ್ಞಾನ ಕೇಂದ್ರದ ದತ್ತು ಗ್ರಾಮಗಳಲ್ಲಿ ಕೈಗೊಳ್ಳಲಾಯಿತು.ಇದರ ಭಾಗವಾಗಿ ದಿನಾಂಕ 14.10.2020 ರಂದು ಕೋಲಾರ ತಾಲ್ಲೂಕಿನ ಯಡಹಳ್ಳಿಯಲ್ಲಿ, ದಿನಾಂಕ 15.10.2020 ರಂದು ಶ್ರೀನಿವಾಸಪುರ ತಾಲ್ಲೂಕಿನ ಕಾಡುದೇವಾಂಡಹಳ್ಳಿಯಲ್ಲಿ ಹಾಗೂ ದಿನಾಂಕ 19.10.2020 ರಂದು ಮಾಲೂರ ತಾಲ್ಲೂಕಿನ ತಿಪ್ಪಸಂದ್ರದಲ್ಲಿ ಮಾನದಂಡ ಸಮೀಕ್ಷೆಯನ್ನು ವಿಜ್ಞಾನಿಗಳು ನಡೆಸಿದರು.








## ವಿಶೇಷ ಕಾರ್ಯಕ್ರಮಗಳು

ಭಾರತದ ಪಿತಾಮಹ ಮಹಾತ್ಮಾ ಗಾಂಧೀಜಿಯವರ 150ನೇ ಜನ್ಮ ದಿನಾಚರಣೆ ಅಂಗವಾಗಿ ಒಂದು ವಾರಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.ದಿನಾಂಕ 26.09.2020 ರಂದು ಶ್ರೀನಿವಾಸಪುರ ತಾಲ್ಲೂಕಿನ ಚೊಕ್ಕರೆಡ್ಡಿ ಹಳ್ಳಿಯಲ್ಲಿ ಮಹಾತ್ಮಾ ಗಾಂಧೀಜಿಯವರ ತತ್ವಗಳು ಮತ್ತು ಇಂದಿನ ಪ್ರಸ್ತುತಿ ಬಗ್ಗೆ ಚರ್ಚಿಸಲಾಯಿತು.ದಿನಾಂಕ: 29.09.2020 ರಂದು ಸರ್ಕಾರಿ ಪ್ರಾಥಮಿಕ ಶಾಲೆ, ತಿಮ್ಮಸಂದ್ರ, ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಯಡಹಳ್ಳಿಯಲ್ಲಿ ಮಕ್ಕಳಿಗೆ ಯೋಗದ

ಮಹತ್ವವನ್ನು ಯೋಗ ಮಾಡುವುದರ ಮೂಲಕ ತಿಳಿಸಿಕೊಡಲಾಯಿತು.ದಿನಾಂಕ 01.10.2020 ರಂದು ಶ್ರೀನಿವಾಸಪುರ ತಾಲ್ಲೂಕಿನ ಕಾಡುದೇವಾಂಡಹಳ್ಳಿಯಲ್ಲಿ ಗಾಂಧೀಜಿಯವರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಪಡಲು ತಿಳಿಸಲಾಯಿತು.ದಿನಾಂಕ 02.10.2020 ರಂದು ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ತೋಟಗಳನ್ನು ಕಳೆ ರಹಿತವಾಗಿ ಇಟ್ಟುಕೊಳ್ಳಲು ಕೈಗೊಳ್ಳಬೇಕಾದ ವಿವಿಧ ನೈಸರ್ಗಿಕ ಕ್ರಮಗಳ ಕುರಿತು ಮತ್ತು ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ತ್ಯಾಜ್ಯದ ನಿರ್ವಹಣೆ ಕುರಿತು ಉಪನ್ಯಾಸ ನೀಡಲಾಯಿತು. ಅಂದಾಜು 50 ರೈತರು ಭಾಗವಹಿಸಿದ್ದರು.






## ದ್ವೈಮಾಸಿಕ ಕಾರ್ಯಾಗಾರ

ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ಕೃಷಿ ಇಲಾಖೆ ಕೋಲಾರ ಇವರು ಜಂಟೀಯಾಗಿ ದ್ವೈಮಾಸಿಕ ಕಾರ್ಯಾಗಾರವನ್ನು ದಿನಾಂಕ 9-10-2020 ರಂದು ಹಮ್ಮಿಕೊಳ್ಳಲಾಗಿತ್ತು.ಈ ಕಾರ್ಯಕ್ರಮದಲ್ಲಿ ಕೆವಿಕೆಯ ಎಲ್ಲ ವಿಜ್ಞಾನಿಗಳು ಭಾಗವಹಿಸಿ ಜಿಲ್ಲೆಯ ಪ್ರಮುಖ ಬೆಳೆಗಳ ನಿರ್ವಹಣೆ ಹಾಗೂ ರೋಗ ಮತ್ತು ಕೀಟಗಳ ನಿರ್ವಹಣೆಯ ಕುರಿತು ಚರ್ಚಿಸಿದರು.





ರಾಷ್ಟ್ರೀಯ ಅಂತರಜಾಲ್ ಪೋಸ್ಟರ್ ಕಾರ್ಯಕ್ರಮಗಳನ್ನು ದಿನಾಂಕ 20.10.2020 ರಂದು ಕೆವಿಕೆ ಹಾಗೂ ಶ್ರೀ. ದೇವರಾಜ್ ಅರಸ್ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ, ಕೋಲಾರರವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು. ಡಾ. ಕೆ.ಎಂ. ಇಂದಿರೇಶ್, ಗೌರವಾನ್ವಿತ ಕುಲಪತಿಗಳು ತೋವಿವಿ, ಬಾಗಲಕೋಟೆ, ಡಾ. ವೈ.ಕೆ. ಕೋಟಿಕಲ್, ವಿಸ್ತರಣಾ ನಿರ್ದೇಶಕರು, ತೋವಿವಿ ಬಾಗಲಕೋಟೆ ಹಾಗೂ ಡಾ. ಜಿ.ಪ್ರದೀಪಕುಮಾರ ರವರು ಉತ್ತಮ ಪೋಸ್ಟರ್‌ಗಳನ್ನು ಆಯ್ಕೆ ಮಾಡಿ ಪ್ರಶಸ್ತಿ ಪತ್ರಗಳನ್ನು ವಿತರಿಸಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಶ್ರೀ. ಕೆ. ತುಳಸಿರಾಮ ಹಾಗೂ ಡಾ. ಚಿಕ್ಕಣ್ಣ ಜಿ.ಎಸ್ ರವರು ಈ ಕಾರ್ಯಕ್ರಮವನ್ನು ಆಯೋಜಿಸಿದ್ದರು.



2020–21ನೇ ಸಾಲಿನಲ್ಲಿ ಆತ್ಮ ಯೋಜನೆಯಡಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ 'ಶ್ರೇಷ್ಠ ಕೃಷಿಕ ಪ್ರಶಸ್ತಿ'ಗೆ ರೈತರನ್ನು ಆಯ್ಕೆ ಮಾಡಲು ಕೃಷಿ ವಿಜ್ಞಾನ ಕೇಂದ್ರದ ಎಲ್ಲ ವಿಜ್ಞಾನಿಗಳು, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ರೇಷ್ಮೆ ಇಲಾಖೆ ಅಧಿಕಾರಿಗಳೊಂದಿಗೆ ಜಿಲ್ಲೆಯ ತಾಲ್ಲೂಕುಗಳಿಗೆ ದಿನಾಂಕ 14.12.2020 ರಿಂದ 29.12.2020 ರವರೆಗೆ ರೈತರ ತೋಟಗಳಿಗೆ ಭೇಟಿ ನೀಡಿ ರೈತರನ್ನು ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಆಯ್ಕೆ ಮಾಡಿದರು.



ದಿನಾಂಕ 25.12.2020 ರಂದು ಗೌರವಾನ್ವಿತ ಪ್ರಧಾನ ಮಂತ್ರಿಗಳಾದ ಶ್ರೀ. ನರೇಂದ್ರ ಮೋದಿಯವರು 'ಪಿ.ಎಮ್. ಕಿಸಾನ್ ಹಣ ಬಿಡುಗಡೆ ಸಮಾರಂಭ'ದ ಅಂತರರ್ಜಾಲ ಕಾರ್ಯಕ್ರಮವನ್ನು ಕೆವಿಕೆ ಆವರಣದಲ್ಲಿ ಬಿತ್ತರಿಸಲಾಯಿತು. ಕೆವಿಕೆಯ ಮುಖ್ಯಸ್ತರು, ವಿಜ್ಞಾನಿಗಳು, ಸಿಬ್ಬಂದಿಗಳು ಮತ್ತು 85 ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಪ್ರಮುಖ ದಿನಗಳ ಆಚರಣೆ



ರೈತ ಮಹಿಳಾ ದಿವಸದ ಅಂಗವಾಗಿ ದಿನಾಂಕ 15.10.2020 ರಂದು ಆರೋಗ್ಯವೇ ಭಾಗ್ಯ ಯೋಜನೆಯಡಿಯಲ್ಲಿ ಕೊವಿಡ್ ವಿಷಮ ಸ್ಥಿತಿಯಲ್ಲಿ ಉತ್ತಮ ಆರೋಗ್ಯಕ್ಕಾಗಿ ಆಹಾರ ಎಂಬ ವಿಷಯದ ಕುರಿತು ಡಾ. ಚಿಕ್ಕಣ್ಣ ಜಿ.ಎಸ್ ರವರು ನಲಪ್ಪನಹಳ್ಳಿ, ಮಾಲೂರ ತಾಲ್ಲೂಕು ಮತ್ತು ಡಾ. ಅಂಬಿಕಾ ಡಿ.ಎಸ್ ರವರು ಕೋಲಾರ ತಾಲ್ಲೂಕಿನ ಬಸವನತ್ತದಲ್ಲಿ ವಿಚಾರ ಮಂಡಿಸಿದರು.

"ಮಣ್ಣನ್ನು ಜೀವಂತವಾಗಿರಿಸಿಕೊಳ್ಳಿ, ಮಣ್ಣಿನ ಜೀವವೈವಿಧ್ಯತೆಯನ್ನು ರಕ್ಷಿಸಿ"ಎಂಬಘೋಷಣೆ ವಾಕ್ಯದೊಂದಿಗೆವಿಶ್ವ ಮಣ್ಣು ದಿನವನ್ನು ದಿನಾಂಕ: 05.12.2020 ರಂದು ಕೃಷಿ ವಿಜ್ಞಾನ ಕೇಂದ್ರ, ಕೆವಿಕೆ ಮತ್ತು ಕೃಷಿ ಇಲಾಖೆ ಕೋಲಾರ ಇವರ ಸಹಯೋಗದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಆಚರಿಸಲಾಯಿತು.

ಮಾನವ ಕುಲದ ಹಸಿವನ್ನು ನೀಗಿಸಲು ಹಗಲು ರಾತ್ರಿ ಶ್ರಮಿಸುವ ರೈತನೇ ಜೀವಾಳ, ಉಳುವಾ ಯೋಗಿಗೆ ನಮನ ಎಂಬ ಶಿರ್ಷಿಕೆಯಡಿ ರೈತರ ದಿನಾಚರಣೆಯನ್ನು ದಿನಾಂಕ 23.12.2020 ರಂದು ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ಕೃಷಿ ಇಲಾಖೆ, ಕೋಲಾರ, ಜಿಲ್ಲಾ ಕೃಷಿಕ ಸಮಾಜ, ಕೋಲಾರ, ತಾಲ್ಲೂಕು ಕೃಷಿಕ ಸಮಾಜ, ಕೋಲಾರ ಇವರ ಸಹಯೋಗದಲ್ಲಿ ತೋಟಗಾರಿಕೆ ಮಹಾವಿದ್ಯಾಲಯ, ಟಮಕ, ಕೋಲಾರದಲ್ಲಿ ಹಮ್ಮಿಕೊಳ್ಳಲಾಗಿತ್ತು.



ನಿವೃತ್ತ ವಿಸ್ತರಣಾ ನಿರ್ದೇಶಕ ಗುರುಪ್ರಸಾದ್ ಸಲಹೆ
## ಜಿಲ್ಲೆಗೆ ಪರಿಸರಸ್ನೇಹಿ ಗೇರು ಬೆಳೆ ಸೂಕ್ತ

ಪ್ರಜಾವಾಣಿ ವಾರ್ತೆ

ಕೋಲಾರ: 'ಕೃಷಿ ಚಟುವಟಿಕೆಗಳಿಗೆ ಮಳೆಯನ್ನೇ ಆಶ್ರಯಿಸಿರುವ ಕೋಲಾರ ಜಿಲ್ಲೆಯಲ್ಲಿ ರೈತರು ಪರಿಸರಸ್ನೇಹಿ ಗೇರು (ಗೋಡಂಬಿ) ಬೆಳೆ ಬೆಳೆಯಬಹುದು. ಗೇರು ಬೆಳೆ ಇಲ್ಲಿನ ವಾತಾವರಣಕ್ಕೆ ಸೂಕ್ತ' ಎಂದು ಕೃಷಿ ವಿಜ್ಞಾನ ಕೇಂದ್ರದ ನಿವೃತ್ತ ಸಹ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕ ಗುರುಪ್ರಸಾದ್ ಸಲಹೆ ನೀಡಿದರು.

ಗೋಡಂಬಿ ಬೆಳೆಯ ಆಧುನಿಕ

ಗೋಡಂಬಿ ಬೆಳೆಯ ಆಧುನಿಕ ಬೇಸಾಯ ಕ್ರಮ ಕುರಿತು ಕೋಲಾರದಲ್ಲಿ ಶುಕ್ರವಾರ ನಡೆದ ಕಾರ್ಯಾಗಾರದಲ್ಲಿ ತೋಟಗಾರಿಕೆ ವಿಜ್ಞಾನಿಗಳು

ಮುಳಬಾಗಿಲು ತಾಲ್ಲೂಕಿನ ಮೂಡಿಯನೂರು ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಪೋಷಣ್ ಮಾಸಾಚರಣೆ ಕಾರ್ಯಕ್ರಮ ನಡೆಯಿತು

## ಅಪೌಷ್ಟಿಕತೆಯಿಂದ ರಕ್ತಹೀನತೆ

ಮುಳಬಾಗಿಲು: ಪೋಷಣ ಅಭಿಯಾನ ಜನಾಂದೋಲನ ಕಾರ್ಯಕ್ರಮ ಕೋಲಾರ ಜಿಲ್ಲೆಯ ಮುಳಬಾಗಿಲು ... ಯಶಸ್ವಿಯಾಗಿ ... ಮೆಚ್ಚುಗೆಯ ... ಕೋಲಾರ ಜಿಲ್ಲಾ ... ಮಕ್ಕಳ ಅಭಿವೃದ್ಧಿ ...ದೇಶಕಿ ಎಂ.ಜಿ.ಪಾಲಿ ... ಮೂಡಿಯನೂರು

ಸಿಡಿಪಿಒ ಕೆ.ಪ್ರಭಾವತಿ ಮಾತನಾಡಿ, ದೇಶದಲ್ಲಿ ಅಪೌಷ್ಟಿಕತೆ, ಕುಬ್ಜತೆ, ರಕ್ತ ಹೀನತೆ ಹಾಗೂ ಹುಟ್ಟುವಾಗ ತೂಕ ಕಡಿಮೆ ಇರುವ ಶಿಶುಗಳ ಸಂಖ್ಯೆಯಲ್ಲಿ ಇಳಿಕೆ ಸಾಧಿಸುವ ನಿಟ್ಟಿನಲ್ಲಿ ಸರ್ಕಾರ ಪೋಷಣ ಅಭಿಯಾನ ಜಾರಿಗೊಳಿಸಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಕ್ಕಳಿಗೆ ಅನ್ನಪ್ರಾಶನ, ಗರ್ಭಿಣಿಯರಿಗೆ ಸೀಮಂತ ಕಾರ್ಯಕಮ ಏರ್ಪಡಿಸಲಾಗಿತು.

ಕೋಲಾರದಲ್ಲಿ ನಡೆದ ವಿಶ್ವ ಮಣ್ಣು ದಿನಾಚರಣೆಯಲ್ಲಿ ಜಂಟಿ ನಿರ್ದೇಶಕಿ ರೂಪದೇವಿ ಮಾತನಾಡಿದರು

## ಜೀವ ಸಂಕುಲಕ್ಕೆ ಮಣ್ಣು ಅವಶ್ಯ

ಕೋಲಾರ: ಪ್ರತಿ ಜೀವಿಯು ಜೀವಂತವಾಗಿರಲು ಮಣ್ಣು ಕಾರಣ. ಮಣ್ಣು ಇಲ್ಲವೆಂದರೆ ಯಾವುದೇ ಜೀವವು ಇಲ್ಲ. ಮಣ್ಣಿಗೂ ಜೀವವಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ವಿ.ಡಿ.ರೂಪದೇವಿ ಹೇಳಿದರು.

ನಗರದ ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ವಿಶ್ವ ಮಣ್ಣು ದಿನ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಸಗೊಬ್ಬರವನ್ನು ಅವಶ್ಯಕತೆಗೆ ಅನುಗುಣವಾಗಿ ಬಳಸಬೇಕು. ಉಳಿದ ಕಡ ಕೊಟ್ಟಿಗೆ ಗೊಬ್ಬರವನ್ನು ಉಪಯೋಗಿಸಬೇಕು. ಸಮಗ್ರ ಪೋಷಕಾಂಶಗಳು ಮಣ್ಣಿನಲ್ಲಿ ಇದ್ದರೆ ಬೆಳೆ ಉತ್ತಮವಾಗಿ ಬರುತ್ತದೆ ಎಂದರು.

2002ರಲ್ಲಿ ಜಾಗತಿಕ ಮಟ್ಟದಲ್ಲಿ ಮಣ್ಣಿನ ಸಂರಕ್ಷಣೆ ಬಗ್ಗೆ ಚರ್ಚೆ ನಡೆದಿವೆ. ಮಣ್ಣಿನ ಅಭಿವೃದ್ಧಿಯಾದರೆ ರೈತರ ಅಭಿವೃದ್ಧಿ, ರೈತರ ಅಭಿವೃದ್ಧಿಯಿಂದ ದೇಶದ ಅಭಿವೃದ್ಧಿ ಸಾಧ್ಯ. ಆದ್ದರಿಂದ ಮಣ್ಣನ್ನು ಸಂರಕ್ಷಿಸಬೇಕು ಎಂದು ಸಲಹೆ ನೀಡಿದರು.

ಸಹ ವಿಸ್ತರಣಾ ನಿರ್ದೇಶಕ ಟಿ.ಬಿ. ಬಸವರಾಜು, ಡಾ.ಅನಿಲ್ ಕುಮಾರ್, ಸ್ವಾತಿ, ಉಮೇಶ್ ನಾಯ್ಕ, ಕೆ.ತುಳಸಿರಾಮ, ಪಂಕಜಾ, ನಾಗರಾಜ್, ಜ್ಯೋತಿ ಕಟ್ಟೆಗೌಡರ್, ಡಾ.ಶಶಿಧರ್ ಇದ್ದರು.

ಹವಾಮಾನ ಆಧಾರಿತ ತಾಂತ್ರಿಕತೆ ಬಳಕೆ ತರಬೇತಿ
## ರೇಷ್ಮೆ ಕೃಷಿಗೆ ತಂತ್ರಜ್ಞಾನದ ನೆರವು

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ: ರೇಷ್ಮೆ ಹುಳುಗಳ ಹಂತಕ್ಕೆ ತಕ್ಕಂತೆ ಸ್ಥಳಾವಕಾಶ ನೀಡಿ ಉಷ್ಣಾಂಶ ಮತ್ತು ಶೈತ್ಯಾಂಶ ನಿರ್ವಹಣೆ ಮಾಡಬೇಕು. ರೇಷ್ಮೆ ಕೃಷಿಯಲ್ಲಿ ತಾಂತ್ರಿಕತೆ ಅಳವಡಿಸಿಕೊಳ್ಳಬೇಕು ಎಂದು ರೇಷ್ಮೆ ಸಹಾಯಕ ನಿರ್ದೇಶಕ ಎಸ್.ಎನ್.ಶ್ರೀನಿವಾಸ್ ಹೇಳಿದರು.

ತಾಲ್ಲೂಕಿನ ಕುಪನಹಳ್ಳಿ, ರೇಷ್ಮೆ

ಜ್ವರಕ್ಕೆ ಬರುವಾಗ ಮತ್ತು ಜ್ವರದಿಂದ ಹೊರಬರುವುದನ್ನು ಗಮನಿಸಿ ನಿರ್ವಹಣೆ ಮಾಡುವ ಅನಿವಾರ್ಯವಿದೆ. ಅದಷ್ಟು ಸಾಮರ್ಥ್ಯಕ್ಕಿಂತ ಕಡಿಮೆ ಸಾಕಣೆ ಮಾಡಿ ಹೆಚ್ಚು ಸ್ಥಳಾವಕಾಶ ನೀಡಬೇಕು ಎಂದು ಸಲಹೆ ನೀಡಿದರು.

ಚಾಕಿ ಕೇಂದ್ರದವರು ವೈಜ್ಞಾನಿಕವಾಗಿ ಉಷ್ಣಾಂಶ, ಶೈತ್ಯಾಂಶ ನಿರ್ವಹಣೆ ಮಾಡುವುದು ಉತ್ತಮ. ಪ್ರತಿ ತಂಡದಲ್ಲಿ ಚಾಕಿ ಮಾಡುವಾಗ

ಬಂಗಾರಪೇಟೆ ತಾಲ್ಲೂಕಿನ ಕುವ್ವನಹಳ್ಳಿ ರೇಷ್ಮೆ ಇಲ... ಹಾಗೂ ಕೋಲಾರದ ಕೃಷಿ ವಿಜ್ಞಾನ ಕೇಂದ್ರ ರೇಷ...

## ರೋಗ ನಿಯಂತ್ರಣಕ್ಕೆ ಸಲಹೆ

ವಿಜಯವಾಣಿ ಸುದ್ದಿಜಾಲ ಕೋಲಾರ

ತಮಿಳುನಾಡು, ಆಂಧ್ರಪ್ರದೇಶ ಹಾಗೂ ಪುದುಚೇರಿಯಲ್ಲಿ ಅಪ್ಪಳಿಸಿದ ನಿವಾರ್ ಚಂಡಮಾರುತ ಪರಿಣಾಮ ಜಿಲ್ಲಾದ್ಯಂತ ಮಳೆಯಾಗಿರುವುದರಿಂದ ಆಲೂಗಡ್ಡೆಗೆ ...

## ನಿರಂತರ ಮಳೆ–ಆಲೂಗಡ್ಡೆಗೆ ಅಂಗಮಾರಿ

ಸಂ.ಕ.ಸಮಾಚಾರ, ಕೋಲಾರ

ಇದೀಗ ಚಂಡಮಾರುತದ ಹಾವಳಿಯಿಂದ ತಂಪಾದ ವಾತಾವರಣವಿರುವುದರಿಂದ ಆಲೂಗಡ್ಡೆಯ ಅಂಗಮಾರಿ ರೋಗ ಉಲ್ಬಣಗೊಳ್ಳುತ್ತಿದೆ. ಇದು ಫೈಟೋಪ್ತರಾ ಇನ್‌ಫೆಸ್ಟನ್ಸ್ ಎಂಬ ಶಿಲೀಂದ್ರದಿಂದ ಬರುವ ಮುಖ್ಯ ರೋಗವಾಗಿದೆ ಎಂದು ಸಸ್ಯ ಸಂರಕ್ಷಣೆ ವಿಜ್ಞಾನಿ ಡಾ.ಡಿ.ಎಸ್. ಅಂಬಿಕಾ ತಿಳಿಸಿದರು.

ಗುರುವಾರ ಸುಗಟೂರು ರೈತ ಸಂಪರ್ಕ ಕೇಂದ್ರದಲ್ಲಿ ಆಲೂಗಡ್ಡೆ ಬೆಳೆಯ ಸಂರಕ್ಷಣಾ ಕ್ರಮಗಳ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿ ರೋಗಾಣು ಪ್ರಾಥಮಿಕವಾಗಿ ಮಣ್ಣಿನಲ್ಲಿರುತ್ತದೆ. ರೋಗಪೀಡಿತ ಗಿಡದಿಂದ ಬಂದ ಬಿತ್ತನೆ ಗಡ್ಡೆಯನ್ನು ಉಪಯೋಗಿಸಿದಾಗ ಸೋಂಕು ಹರಡುತ್ತದೆ. ರೋಗಪೀಡಿತ ಗಿಡದಿಂದ ಎರಡನೆ ಹಂತದಲ್ಲಿ ರೋಗಾಣು ಗಾಳಿಯ ಮುಖಾಂತರ ಹರಡುತ್ತದೆ ಎಂದರು.

ಅಂಗಮಾರಿ ರೋಗದ ನಿಯಂತ್ರಣಕ್ಕೆ ಮೊದಲಿಗೆ ಸೊಲನೇಸಿ ಕುಟುಂಬಕ್ಕೆ ಸೇರಿದ ಬೆಳೆಗಳನ್ನು ಬೆಳೆದ ಕ್ಷೇತ್ರಗಳಲ್ಲಿ ಮರು ಬೆಳೆಯಾಗಿ ಆಲೂಗಡ್ಡೆ ಬೆಳೆಯಬಾರದು. ಬಿತ್ತನೆಗೂ ಮುಂಚೆ ಮಣ್ಣಿಗೆ ಜೈವಿಕ ಪೀಡೆನಾಶಕಗಳಾದ ಟ್ರೈಕೋಡರ್ಮಾ ಮತ್ತು ಸುಡೊಮೋನೊಸ್ ಉಪಚರಿಸಿದ ಕೊಟ್ಟಿಗೆ ಗೊಬ್ಬರ ಹಾಕಬೇಕು ಎಂದು ಸಲಹೆ ಮಾಡಿದರು. ಬಿತ್ತನೆಗೂ ಮುಂಚೆ ಬಿತ್ತನೆ ಗಡ್ಡೆಗಳನ್ನು ಪ್ರತಿ ಲೀಟರ್ ನೀರಿಗೆ 4 ಗ್ರಾಂ ಮ್ಯಾಂಕೋಜೆಬ್ + 0.5 ಗ್ರಾಂ ಸ್ಟ್ರೆಪ್ಟೋಸೈಕ್ಲಿನ್ ಪ್ರತಿ ಲೀಟರ್ ನೀರಿಗೆ ಬೆರೆಸಿದ ದ್ರಾವಣದಲ್ಲಿ 10 ನಿಮಿಷ ಉಪಚರಿಸಿದ ನಂತರ ನೆರಳಿನಲ್ಲಿ ಒಣಗಿಸಿ ಬಿತ್ತನೆ ಮಾಡುವುದರಿಂದ ಪ್ರಾಥಮಿಕವಾಗಿ ಸೋಂಕು ತಗಲುವುದನ್ನು ತಡೆಯಬಹುದು ಎಂದು ತಿಳಿಸಿದರು.

ರೋಗಕ್ಕೆ ತುತ್ತಾದ ಗಡ್ಡೆ ಹಾಗೂ ಗಿಡದ ಭಾಗಗಳನ್ನು ನಾಶಪಡಿಸುವ ಜತೆಗೆ ಮುಂಜಾಗ್ರತಾ ಕ್ರಮವಾಗಿ ಮ್ಯಾಂಕೋಜೆಬ್-3 ಗ್ರಾಂ ಅಥವಾ ಕ್ಲೋರೋಥೆಲೋನಿಲ್-1 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡಬೇಕು. ಈ ರೋಗವು ಮತ್ತೆ ಉಲ್ಬಣಗೊಂಡಲ್ಲಿ ಡೈಮಿಥೊಮಾರ್ಫ-1 ಗ್ರಾಂ ಜೊತೆಗೆ ಮ್ಯಾಂಕೋಜೆಬ್-3 ಗ್ರಾಂ ಅಥವಾ ಫೆನಾಮಿಡೋನ್+ ಮ್ಯಾಂಕೋಜೆಬ್-3 ಗ್ರಾಮ ಅಥವಾ ಸೈಮಾಕ್ಸಿನೆಲ್+ ಮ್ಯಾಂಕೋಜೆಬ್-3 ಗ್ರಾಂ ಅಥವಾ ಪೆಮಾಕ್ಸಿಡೋನ್+ಸೈಮಾಕ್ಸಿನೆಲ್-1 ಮಿ.ಲೀ.ನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ರೋಗ ಹತೋಟಿಯಾಗುವವರೆಗೂ ಒಂದರ ನಂತರ ಒಂದರಂತೆ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಣ ಮಾಡಬಹುದು ಎಂದು ತಿಳಿಸಿದರು. ತೋಟಗಾರಿಕೆ ವಿಜ್ಞಾನಿ ಡಾ. ಜ್ಯೋತಿ ಕಟ್ಟೆಗೌಡರ, ಕೃಷಿ ಹವಾಮಾನ ಶಾಸ್ತ್ರಜ್ಞೆ ಜಿ.ಆರ್.ಸ್ವಾತಿ, ಆತ್ಮ ಯೋಜನೆ ತಾಂತ್ರಿಕ ವ್ಯವಸ್ಥಾಪಕರಾದ ಮಮತಾ ಮತ್ತು ದಿವ್ಯಾ ಉಪಸ್ಥಿತರಿದ್ದರು.

| | |
|---|---|
| ಸಂಪಾದಕರು | : ಕೆ. ತುಳಸಿರಾಮ್ |
| ಸಹ ಸಂಪಾದಕರು | : ಡಾ. ಜ್ಯೋತಿ ಕಟ್ಟೇಗೌಡರ |
| ಸಹಾಯಕ ಸಂಪಾದಕರು | : ಡಾ. ಅನೀಲ್ ಕುಮಾರ್. ಎಸ್. |
| | ಡಾ. ಅಂಬಿಕಾ ಡಿ. ಎಸ್.<br>ಡಾ. ಶಶಿಧರ್ ಕೆ.ಆರ್ |
| | ಡಾ. ಚಿಕ್ಕಣ್ಣ ಜಿ.ಎಸ್ |
| | ಶ್ರೀ. ಉಮೇಶ ನಾಯ್ಕ<br>ಕು. ಸ್ವಾತಿ ಜಿ. ಆರ್. |
| ಪುಟ ವಿನ್ಯಾಸ | : ಸಿ.ಎಸ್. ಜ್ಞಾನಸುಧಾ |
| ಅಕ್ಷರ ಜೋಡಣೆ | : ಸಾವಿತ್ರಿ ಜಿ. ರುದ್ರಾಪೂರ |
| ಸಹಾಯಕರು | : ರವಿಶಂಕರ್ ಹೆಚ್.ಎಂ. |

**ಪ್ರಕಾಶಕರು**

ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು,
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ,
ಕೋಲಾರ– 563 103.




ಪ್ರತಿ ಸೋಮವಾರ ರೈತರಿಗೆ ಪರಿಹಾರ
ಸ್ಥಳ: ಕೃಷಿ ವಿಜ್ಞಾನ ಕೇಂದ್ರ ಕೋಲಾರ.
ಸಮಯ: ಬೆಳಿಗ್ಗೆ 9.00 ರಿಂದ ಸಂಜೆ: 5.00